ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ10-02-2026 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ

ನಾನು ನನ್ನ ತಂದೆಯ ಕಾಲದಿಂದ ವಾದಿಯನ್ನು ನೋಡುತ್ತಿದ್ದೆನೆ. ವಾದಿಯ ಮನೆ ಮತ್ತು ಜಮೀನು ಕೊರ್ಲಕೈ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ವಾದಿಯ ಮನೆ ಬೆಟ್ಟ ಸರ್ವೆ ನಂ 55 ರಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವಾದಿಯ ಮನೆ ಬೆಟ್ಟ ಸರ್ವೆ ನಂ 55 ರಲ್ಲಿ 1964 ರಿಂದ ಇರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

2. ನನ್ನ ಮಾಲ್ಕಿ ಸ್ವಾಧೀನದಲ್ಲಿರುವ ಸರ್ವೆ ನಂ 27/1 ಆಗಿರುತ್ತದೆ. ನನ್ನ ಮನೆಯು ಸಹ ಬೆಟ್ಟ ಸರ್ವೆ ನಂ 55 ರಲ್ಲಿ ಇರುತ್ತದೆ. ನಾನು ನಮ್ಮ ಮನೆ ಇರುವ ಬೆಟ್ಟ ಸರ್ವೆ ನಂ 55 ರಿಂದ ನನ್ನ ಮಾಲ್ಕಿ ಸ್ವಾಧೀನದಲ್ಲಿರುವ ಸರ್ವೆ ನಂ 27/1 ರ ಜಮೀನಿಗೆ ವಾದಿ ಯಾವ ಮಾರ್ಗವಾಗಿ ಹೋಗುತ್ತಾರೊ ಅದೇ ಮಾರ್ಗದಲ್ಲಿ ನಾನು ಹೋಗುತ್ತೇನೆ. ನನ್ನ ಮನೆಯಿಂದ ನನ್ನ ತೋಟಕ್ಕೆ ಹೋಗಲು ಎರಡು ತೋಟಗಳನ್ನು ದಾಟಿಕೊಂಡು ಹೋಗಬೇಕು. ನಮ್ಮ ಮನೆಗಳು ಬೇರೇಬೇರೇ ಕಡೆ ಇರುತ್ತವೆ ಹಾಗೂ ತೋಟಗಳು ಬೇರೇಬೇರೇ ಕಡೆ ಇರುತ್ತವೆ ಎಂದರೆ ಸರಿ. ಒಂದು ತೋಟದ ಮಾಲೀಕರು ತಮ್ಮ ತೋಟಕ್ಕೆ ಹೋಗಬೇಕಾದರೆ ಇನ್ನೊಂದು ತೋಟದ ಮೂಲಕವೇ ಹೋಗಬೇಕಾಗುತ್ತದೆ ಎಂದರೆ ಸರಿ.

3. ಕೊರ್ಲಕೈ ಗ್ರಾಮ ಸುಮಾರು 15 ಎಕರೆ ಇರುತ್ತದೆ. ವಾದಿಗೆ ಯಾವ ಯಾವ ಸರ್ವೆ ನಂಬರಗಳಲ್ಲಿ ತೋಟ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ನಿ.ಪಿ-5 ರಿಂದ ನಿ.ಪಿ-9 ರಲ್ಲಿರುವ ತೋರಿಸಿರುವ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ನನ್ನ ಸರ್ವೆ ನಂ 27/1 ನ್ನು ದಾಟಿದ ನಂತರ ವಾದಿಯ ತೋಟ ಸುಮಾರು 1 ಕಿ, ಮೀ. ದೂರ ಇರುತ್ತದೆ. ನನ್ನ ಸರ್ವೆ ನಂ 27/1 ನ್ನು ದಾಟಿದ ನಂತರ ವಾದಿಯ ತೋಟ ಸುಮಾರು 300 ಮೀ. ಒಳಗೆ ಇರುತ್ತದೆ ಎಂದರೆ ಸರಿಯಲ್ಲ.

4. ನಮ್ಮ ಪೂರ್ವಜರ ಕಾಲದಿಂದ ತಮ್ಮ ತಮ್ಮ ತೋಟಗಳಿಗೆ ಗೊಬ್ಬರ ಹಾಗೂ ತೋಟದಿಂದ ಬಂದ ಉತ್ಪನ್ನಗಳನ್ನು ತಲೆಯ ಮೇಲೆ ಹೊತ್ತುಕೊಂಡು ಸಾಗಿಸಲಾಗುತ್ತಿತ್ತು ಎಂದರೆ ಸರಿ. ಪದೇ ಪದೇ ತೋಟದಲ್ಲಿ ಓಡಾಡಿ ಕಾಲುದಾರಿ ಆಗಿರುತ್ತದೆ ಎಂದರೆ ಸರಿ. ಸದರಿ ಕಾಲುದಾರಿಯಲ್ಲಿ ಓಡಾಡಲು ತೋಟದ ಮಾಲೀಕರು ಒಬ್ಬರಿಗೊಬ್ಬರು ತೊಂದರೆ ಮಾಡುವಂತಿಲ್ಲ ಎಂದರೆ ಸರಿ.



5. ನನ್ನ ತೋಟದಿಂದ ವಾದಿಯ ಮನೆ ಪೂರ್ವ ದಿಕ್ಕಿಗೆ ಬರುತ್ತದೆ. ನಮ್ಮ ತೋಟದಿಂದ ವಾದಿಯ ಮನೆಕಡೆ ಧರೆ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ನನ್ನ ತೋಟಕ್ಕೆ ವಾದಿಯ

ಮನೆಯ ಗಡಿಯಿಂದ ನೀರುಹರಿಯುವ ಜಾಗದಿಂದ ಕೆಳಗೆ ಇಳಿದು ಬರಬೇಕು ಎಂದರೆ ಸರಿ. ವಾದಿ ತನ್ನ ಮನೆಯಿಂದ ಕಲ್ಲಿನಿಂದ ಮೆಟ್ಟಿಲನ್ನು ಕಟ್ಟಿಕೊಂಡಿರುತ್ತಾನೆ ಎಂದರೆ ಸರಿ. ಸದರಿ ತೋಟಕ್ಕೆ ಹೋಗಲು ವಾದಿ ಸರ್ವೆ ನಂ 27 ಕ್ಕೆ ಹೋಗುವ ದಾರಿಗೆ ಹೊಂದಿಕೊಂಡಂತೆ ಒಂದು ದಾರಿಯನ್ನು ಮಾಡಿಕೊಂಡಿರುತ್ತಾನೆ ಎಂದರೆ ಸರಿ. ನನಗೆ ಬುದ್ದಿ ಬಂದಾಗಿನಿಂದಲೂ ವಾದಿ ತನ್ನ ಮನೆಗೆ ಹೊಗಲು ಕಲ್ಲಿನ ಮೆಟ್ಟಿಲುಗಳನ್ನು ಮಾಡಿಕೊಂಡಿರುತ್ತಾನೆ ಎಂದರೆ ಇರಬಹುದು ಎಂದು ಉತ್ತರಿಸುತ್ತಾರೆ.

6. ದಾವಾ ದಾರಿಗೆ ತೊಂದರೆ ನೀಡಿದ್ದರಿಂದ ವಾದಿ ಈ ದಾವೆಯನ್ನು ನನ್ನ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

7. ನನ್ನ ತಂದೆಯ ಹೆಸರು ಮಂಜ ಗಣಪ ಗೌಡ ಎಂದರೆ ಸರಿ. ಗಣಪ ಜಟ್ಟು ಗೌಡ, ತಮ್ಮ ಗಣಪ ಗೌಡ, ನಾರಾಯಣ ಗಣಪ ಗೌಡ ರವರು ನನ್ನ ತಂದೆಯ ಸಹೊದರರು ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ತಂದೆಯ ಸಹೋದರರು ದಾವಾಸ್ತಿಗೆ ಸಂಬಂದಿಸಿದಂತೆ ತೊಂದರೆ ನೀಡಿದ್ದರಿಂದ ವಾದಿಯ ತಂದೆ ಈದೇ ನ್ಯಾಯಾಲಯದಲ್ಲಿ ದಾರಿಗೆ ಸಂಬಂದಿಸಿದಂತೆ ಘೋಷಣಾತ್ಮಕ ಪರಿಹಾರ ಕೋರಿ OS No 48/1986 ರಂತೆ ನಿ.ಪಿ-12 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ OS No 48/1986 ರಲ್ಲಿ ವಾದಿಯ ತಂದೆ ಮತ್ತು ಅವರ ಸಹೋದರರಿಗೆ ಸದರಿ ದಾವಾ ರಸ್ತೆಗೆ ಸಂಬಂದಿಸಿದಂತೆ ಹಕ್ಕು ಅಧಿಕಾರ ಇರುತ್ತದೆ ಎಂದು ಆದೇಶ ಆಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

8. ವಾದಿ ಈ ದಾವೆ ಸಲ್ಲಿಸುವ ಕಾಲಕ್ಕೆ ಸದರಿ OS No 48/1986 ರ ಬಗ್ಗೆ ಯೂ ಸಹ ವಾದ ಪತ್ರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಆ ಬಗ್ಗೆ ವಿಚಾರ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ OS No 48/1986 ರಲ್ಲಿ ನನ್ನ ತಂದೆ ಮತ್ತು ನನ್ನ ತಂದೆಯ ಸಹೋದರರು ಸದರಿ ಸರ್ವೆ ನಂ 27/1 ರಲ್ಲಿ ಯಾವುದೇ ಕಾಲುದಾರಿ ಇರುವುದಿಲ್ಲ ಎಂದು ಪ್ರತಿಪಾದಿಸಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

9. ನನಗೆ ಸದರಿ OS No 48/1986 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಯಾವುದೇ ಮಾಹಿತಿ ಇಲ್ಲ ಎಂದು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.



10. ದಿಃ 13-07-2020 ರಂದು ದಾವಾ ದಾರಿಗೆ ಸಂಬಂದಿಸಿದಂತೆ ನಾನು ವಾದಿಗೆ ಅಡ್ಡಿ ಆತಂಕ ಪಡಿಸಿರುವುದರಿಂದ ವಾದಿ ನನ್ನ ವಿರುದ್ಧ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

11. ವಾದಿ ಈ ದಾವೆ ಸಲ್ಲಿಸುವ ಕಾಲಕ್ಕೆ ನನ್ನ ದಾವೆಯ ಜೊತೆ ಒಂದು ಹಾತನಕಾಶೆಯನ್ನು ಹಾಜರುಪಡಿಸಿದ್ದು ಸದರಿ ಹಾತ ನಕಾಶೆಯನ್ನು ನಾನು ನೋಡಿ ತಿಳಿದುಕೊಂಡಿಲ್ಲ.

12. ದಾವಾ ದಾರಿಯ ವಸ್ತುಸ್ಥಿತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾ ಜೊತೆ ಸಲ್ಲಿಸಿರುವ ಹಾತ ನಕಾಶೆಯಲ್ಲಿ ತೋರಿಸಿರುವ BC point ನಲ್ಲಿ ಅನಾದಿಕಾಲದಿಂದಲೂ ಒಂದು ಕಾಲು ದಾರಿ ಇರುತ್ತದೆ ಎಂದರೆ ಸರಿ. ಸದರಿ ಕಾಲುದಾರಿಗೆ ಸಂಬಂಸಿದಂತೆ ನನ್ನ ಚಿಕ್ಕಪ್ಪಂದಿರ ಯಾವುದೇ ತಕಾರರು ಇರುವುದಿಲ್ಲ ಎಂದರೆ ಸರಿ. ಸದರಿ ಕಾಲುದಾರಿಗೆ ಸಂಬಂಸಿದಂತೆ ನನ್ನ ತಕರಾರು ಇರುತ್ತದೆ ಎಂದರೆ ಸರಿ.

13. ಸರ್ವೆ ನಂ 27/1 ಕ್ಕೆ ನನ್ನ ತಂದೆಯ ಕಾಲದಲ್ಲಿಯೇ ತಂತಿಬೇಲಿಯನ್ನು ಹಾಕಿಸಿರುತ್ತೆವೆ. ಸದರಿ ತಂತಿ ಬೇಲಿ ನನ್ನ ಸರ್ವೆ ನಂ 27/1 ಕ್ಕೆ ಮಾತ್ರ ಇರುತ್ತದೆ. ಈ ದಾವೆಯನ್ನು ದಾಖಲಿಸಿದ ನಂತರ ಈ ದಾವೆಯಲ್ಲಿ ತಾತ್ಕಲಿಕ ನಿರ್ಬಂದಕಾಜ್ಞೆ ಇದ್ದರೂ ಸಹ ಸದರಿ ಆದೇಶವನ್ನು ಉಲ್ಲಂಘಿಸಿ ದಿಃ 01-05-2020 ರಂದು ಕಲ್ಲಿನ ಕಂಬ ಮತ್ತು ಮುಳ್ಳು ತಂತಿಯನ್ನು ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಸದರಿ ಕಾಲುದಾರಿಗೆ ಸಂಬಂದಿಸಿದಂತೆ ತೊಂದರೆ ಕೊಡುವ ಸಲುವಾಗಿ ನಾನೂಬ್ಬನೇ ನನ್ನ ಮಾಲ್ಕಿ ಸರ್ವೆ ನಂ 27/1 ಕ್ಕೆ ಕಲ್ಲಿನ ಕಂಬ ಮತ್ತು ಮುಳ್ಳು ತಂತಿಯನ್ನು ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕಾಲುದಾರಿಗೆ ಸಂಬಂದಿಸಿದಂತೆ ಕಲ್ಲಿನ ಕಂಬ ಮತ್ತು ಮುಳ್ಳು ತಂತಿಯನ್ನು ಖುಲ್ಲಾ ಪಡಿಸಿಕೊಡಲು ಬಾದ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಆಸ್ತಿಗೆ ಸಂಬಂದಿಸಿದಂತೆ ಕಲ್ಲಿನ ಕಂಬ ಮತ್ತು ಮುಳ್ಳು ತಂತಿಯನ್ನು ಹಾಕಿರುವುದನ್ನು ಬಿಟ್ಟರೆ ಬೇರೇ ಯಾರು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

14. ದಾವಾ BC ಕಾಲುದಾರಿಗೆ ಸಂಬಂದಿಸಿದಂತೆ ವಾದಿಗೆ ನಾನು ಯಾವುದೇ ತೊಂದರೆ ನೀಡಿಲ್ಲ.

15. ನಮ್ಮ ಕುಟುಂಬದವರು ನ್ಯಾಯಾಲಯದ ಆದೇಶದ ಬಗ್ಗೆ ತಿಳುವಳಿಕೆ ಹೇಳಿದ್ದರೂ ದಾವಾ BC ಕಾಲುದಾರಿಗೆ ಸಂಬಂದಿಸಿದಂತೆ ವಾದಿಗೆ ವಾದಪತ್ರದಲ್ಲಿ ಹೇಳಿದಂತೆ ತೊಂದರೆ ನೀಡುತ್ತಿದ್ದೆನೆ ಎಂದರೆ ಸರಿಯಲ್ಲ.



16. ನಾನು ನನ್ನ WS ನಲ್ಲಿ ಹೇಳಿದ ದಾರಿಗೆ ಸಂಬಂದಿಸಿದಂತೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನನ್ನ WS ನಲ್ಲಿ ಹೇಳಿದಂತೆ ಯಾವುದೇ ದಾರಿ ಇಲ್ಲದೇ ಇದ್ದರೂ ಸಹ ದಾವಾ ದಾರಿಗೆ ಸಂಬಂದಿಸಿದಂತೆ ವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ BC ಕಾಲುದಾರಿಗೆ ಸಂಬಂದಿಸಿದಂತೆ ವಾದಿಗೆ ತೊಂದರೆ ಕೊಡುವ ಸಲುವಾಗಿ ನನ್ನ WS ನಲ್ಲಿ ಸದರಿ BC ಕಾಲುದಾರಿಗೆ ಸಂಬದಿಸಿದಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಸದರಿ ದಾವಾ BC ಕಾಲುದಾರಿಗೆ ಸಂಬಂದಿಸಿದಂತೆ ನಾನು ತೊಂದರೆ ನೀಡಿರುವುದರಿಂದ ವಾದಿ ತನ್ನ ತೋಟದಲ್ಲಿನ ಕೃಷಿ ಕೆಲಸಕ್ಕೆ ಸಂಬಂಸಿದಂತೆ ತೊಂದರೆ ಪಡುತ್ತಿದ್ದಾನೆ ಎಂದರೆ ಸರಿಯಲ್ಲ.

18. ವಾದಿಯ ತೋಟಕ್ಕೆ ಹೋಗಲು ದಾವಾ ದಾರಿಯನ್ನು ಹೋರತುಪಡಿಸಿ ಬೇರೇ ದಾರಿ ಇರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

19. ದಾವಾ ರಸ್ತೆಯನ್ನು ಹೊರತುಪಡಿಸಿ ವಾದಿಯ ಜಮೀನಿಗೆ ಹೋಗಲು ಬೇರೇ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ.

20. ವಾದಿ ದಾವಾರಸ್ತೆಗೆ ಸಂಬಂಧಿಸಿದಂತೆ ವಾದಿಯಹಕ್ಕನ್ನು ನಿರಾಕರಿಸಿದ್ದರಿಂದ ಮತ್ತು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದಂತೆ ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ವಾದಿ ಅರ್ಹನಾಗಿರುತ್ತಾನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**